*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 170/2020
CW-4  PW-1

ಹೆಸರು : ಮಹಮ್ಮದ್ ಅಯಾಜ್ ಖಾನ್

ತಂದೆಯ ಹೆಸರು: ಮಹಮ್ಮದ್ ಇಕ್ಬಾಲ್ ಖಾನ್

ವಯಸ್ಸು : 47 ವರ್ಷ

ಉದ್ಯೋಗ : ವ್ಯಾಪಾರ

ವಾಸ ಸ್ಥಳ : ಇಂದಿರಾ ನಗರ ವಾಡಿ

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 10-02-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ಚಾಸಾ-1ರವರ ಪರಿಚಯ ಇತ್ತು ಅವರು ಈಗ ತೀರಿಕೊಂಡಿರುತ್ತಾರೆ. ಚಾಸಾ- 2 ಮತ್ತು 3ರವರ ಪರಿಚಯ ಇದೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತನ ಪರಿಚಯ ಇದೆ.

ದಿಃ 18.06.2019ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ-1ರವರು ನನಗೆ ಕರೆ ಮಾಡಿದ್ದರು. ಅವರು ಕರೆಯಲ್ಲಿ ನನಗೆ ಆರೋಪಿತನು ನನಗೆ ಹೊಡೆದಿದ್ದಾನೆ ಅಲ್ಲಿಗೆ ಬನ್ನಿ ಎಂದು ತಿಳಿಸಿರುತ್ತಾನೆ. ನಾನು ಆ ಸಮಯದಲ್ಲಿ ಕಲಬುರಗಿಯಲ್ಲಿದ್ದ ಕಾರಣ ನಾನು ಘಟನಾ ಸ್ಥಳಕ್ಕೆ ಬಂದು ಚಾಸಾ-1ರವರನ್ನು ವಾಡಿಯ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-1ರವರನ್ನು ಕಲಬುರಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಸ್ಪತ್ರೆಗೆ ಆ ಸಮಯದಲ್ಲಿ ವಾಡಿ ಪೋಲೀಸರು ಬಂದಿದ್ದು ಚಾಸಾ-1ರವರು ಪೋಲೀಸರಿಗೆ ದೂರು ನೀಡಿರುತ್ತಾರೆ.

ಚಾಸಾ-1ರವರು ನನಗೆ ಆಸ್ಪತ್ರೆಯಲ್ಲಿದ್ದಾಗ ಆರೋಪಿತನೊಂದಿಗೆ ಇನ್ನೂ 3 ಜನರಾದ ಚಾಂದ್ ತಂದೆ ಫತು ಮಿಯಾ, ಅಶ್ರಫ್ ತಂದೆ ಸಲೀಂ ಮತ್ತು ಝುವೂರ್ ಖಾನ್ ತಂದೆ ಮಹಮ್ಮದ್ ಇಕ್ಬಾಲ್ ಖಾನ್ ಇವರೂ ಸಹ ಇದ್ದು 4 ಜನ ಸೇರಿ ನನಗೆ ಹಲ್ಲೆ ಮಾಡಿದ್ದಾರೆಂದು ತಿಳಿಸಿದರು. ಪೋಲೀಸರಿಗೂ ಸಹ ನಾನು ಮತ್ತು ಚಾಸಾ-1ರವರು ಈ ವಿಷಯವನ್ನು ತಿಳಿಸಿರುತ್ತೇವೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 18.06.2019ರಂದು ಚಾಸಾ-1ರವರು ನಿಮ್ಮ ಬಂಗಲೆಯ ವಾಚ್ ಮ್ಯಾನ್ ಕೆಲಸ ಮಾಡುತ್ತಿದ್ದಾಗ ಆರೋಪಿತನು ಅಲ್ಲಿಗೆ ಬಂದು ನಿಮ್ಮನ್ನು ಕೇಳಿ ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಅಗ ಚಾಸಾ-1ರವರು ನನಗೇಕೆ ಬೈಯುತ್ತೀಯಾ ಎಂದು ಕೇಳಿದಾಗ ಆರೋಪಿತ ಒಂದು ಚೂಪಾದ ಕಲ್ಲಿನಿಂದ ಆತನ ಬಲ ಹಣೆಗೆ ಹೊಡೆದಿರುತ್ತಾನೆ ಎಂದರೆ ಸರಿ. ಸದರಿ ಹಲ್ಲೆಯಿಂದ ಚಾಸಾ-1ರವರಿಗೆ ರಕ್ತದ ಗಾಯಗಳಾಗಿದ್ದು ಆರೋಪಿತ ಚಾಸಾ-1ರವರಿಗೆ ಕೈಯಿಂದ ಸಹ ಹೊಡೆ ಬಡೆ ಮಾಡಿದ್ದ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತ ಚಾಸಾ-1ರವರಿಗೆ ಇಲ್ಲಿಂದ ಹೋಗದಿದ್ದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದ ಎಂದರೆ ಸರಿ. ಪೋಲೀಸರು ದಿಃ 19.06.2019ರಂದು ನಿಮ್ಮ ಹೇಳಿಕೆಯನ್ನು ಪಡೆದಿದ್ದಾರೆ ಎಂದರೆ ಸರಿ. ನಾನು ಆರೋಪಿತ ಹಲ್ಲೆಗೆ ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ನ್ಯಾಯಲಯದ ಮುಂದಿರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ. ಎನ್.ಎಸ್. ವಕೀಲರಿಂದ -</u>

ಈ ನ್ಯಾಯಲಯದಲ್ಲಿ ನಿಮ್ಮ ವಿರುದ್ಧ ಎಷ್ಟು ಕ್ರಿಮಿನಲ್ ಪ್ರಕರಣಗಳು ಇವೆ ಎಂದರೆ ಸಾಕ್ಷಿ ಒಂದು ಪ್ರಕರಣ ಇತ್ತು ಅದು ಈಗಾಗಲೇ ನಿಕಾಲಿಯಾಗಿದೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಚಾಸಾ-1 ನೀವು ಖರೀದಿ ಮಾಡಿದ ಮನೆಯ ವಾಚ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ ಎಂದು ಹೇಳಿದ್ದೀರಿ ನೀವು ಮನೆ ಖರೀದಿ ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಸದರಿ ಮನೆಯ ಮಾಲಿಕತ್ವ ನಿಮಗೆ ಸೇರಿಲ್ಲ ಎಂದರೆ ಸಾಕ್ಷಿ ಮೂಲ ಮಾಲಿಕರು ನನಗೆ ಒಂದು ಬಾಂಡ್ ಪತ್ರವನ್ನು ಬರೆದು ಕೊಟ್ಟಿದ್ದರು ಮತ್ತು ಅದನ್ನು ನಾನು ಪೋಲೀಸರಿಗೆ ನೀಡಿದ್ದೇನೆಂದು ನುಡಿಯುತ್ತಾರೆ. ಸದರಿ ಮನೆಯ ಮೂಲ ಮಾಲಿಕರು ಕೈಜಾದ್ ರುಸ್ತುಮ್ ಇರಾನಿ ಆಗಿರುತ್ತಾರೆ. ನನಗೆ ಆ ದಿನ ಚಾಸಾ-1ರವರು 09.30 ಗಂಟೆಗೆ ಕರೆ ಮಾಡಿದ್ದು ನಾನು 10.00 ಗಂಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಬಂದು ತಲುಪಿರುತ್ತೇನೆ. ಕಲಬುರಗಿಯಿಂದ ನಮ್ಮ ಮನೆಯು ಸುಮಾರು 40 ಕಿ.ಮೀ ದೂರ ಇದೆ. ನಮ್ಮ ಮನೆಯಿಂದ ಘಟನಾ

ಸ್ಥಳವು ಸುಮಾರು 500 ಮೀ ದೂರದಲ್ಲಿದೆ. ಚಾಸಾ-1ರವರು ಎಂದಿಗೂ ನಿಮಗೆ ಕರೆ ಮಾಡಿ ಆರೋಪಿತ ಹಲ್ಲೆ ಮಾಡಿದ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನೀವು ಚಾಸಾ-1ರವರನ್ನು ಯಾವುದೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ಕಲಬುರಗಿ ಆಸ್ಪತ್ರೆಯಲ್ಲಿ 3 ದಿನ ಒಳ ರೋಗಿಯಾಗಿದ್ದರು. ಆಸ್ಪತ್ರೆಯ ದಾಖಲೆಗಳನ್ನು ಪೋಲೀಸರಿಗೆ ನೀಡಿರುತ್ತೇನೆ. ನೀವು ವೈದ್ಯರಿಂದ ಸುಳ್ಳು ದಾಖಲೆಗಳನ್ನು ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ಎಂದಿಗೂ ಚಾಸಾ-1ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನೀವು ವಾಡಿ ಗ್ರಾಮದಲ್ಲಿ ಜಗಳ ಮಾಡುವ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನೊಂದಿಗೆ ಇನ್ನೂ 3 ಜನರಾದ ಚಾಂದ್ ತಂದೆ ಫತು ಮಿಯಾ, ಅಶ್ರಫ್ ತಂದೆ ಸಲೀಂ ಮತ್ತು ಝುಫೂರ್ ಖಾನ್ ತಂದೆ ಮಹಮ್ಮದ್ ಇಕ್ಬಾಲ್ ಖಾನ್ ಇವರೂ ಸಹ ಇದ್ದು 4 ಜನ ಸೇರಿ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹೇಳಿಕೆಯಲ್ಲಿ ಈ ಮೇಲೆ ಕಾಣಿಸಿದ 3 ಜನರ ಹೆಸರು ನಮೂದು ಇಲ್ಲ ಎಂದರೆ ಸಾಕ್ಷಿ ನಾನು ಹೇಳಿದ್ದರೂ ಸಹ ಪೋಲೀಸರು ಅವರ ಹೆಸರುಗಳನ್ನು ಬರೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಚಾಸಾ-1ರವರಿಗೆ ಯಾವುದೇ ರಕ್ತದ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ. 1 ರಂತಹ ಕಲ್ಲುಗಳು ವಾಡಿ ಗ್ರಾಮದಲ್ಲಿ ಬೇಕಾದಷ್ಟು ಜಾಗದಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ. 1ನ್ನು ಪೋಲೀಸರು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನೀವು ಘಟನೆಯನ್ನು ನೋಡಿಲ್ಲ ಎಂದರೆ ಸರಿ. ನೀವು ನಿಮ್ಮ ಉಳಿದ ಪ್ರಕರಣಗಳಿಗೆ ಅನುಕೂಲವಾಗಲಿ ಎಂದು ಮತ್ತು ಆರೋಪಿತನ ವಿರುದ್ಧ ದ್ವೇಷ ಇದ್ದ ಕಾರಣ ಸುಳ್ಳು ದೂರನ್ನು ನೀಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.